ಲೋಕೋಪಯೋಗಿ ಇಲಾಖಾ ವ್ಯಾಪ್ತಿಯ ರಸ್ತೆಗಳಿಗೆ ಸಂಬಂಧಿಸಿದಂತೆ ವಿವರಗಳು ಕೆಳಕಂಡಂತಿದೆ :

ತಾಲ್ಲೂಕು	ಪ್ರತಿ ವರ್ಷಕ್ಕೆ ಲಕ್ಷ ರೂ.ಗಳಲ್ಲಿ	90-91, 91-92 ಹಾಗೂ 92-93ರ ಒಟ್ಟು 3 ವರ್ಷಕ್ಕೆ
ಹಾಸನ	12.85	38.55
ಬೇಲೂರು	10.99	32.97
ಚೆನ್ನರಾಯಪಟ್ಟಣ	18.02	54.06
ಅರಸಿಕರೆ	15.84	47.52
ಹೊಳೆನರಸಿಪುರ	15.04	45.12
ಅರಕಲಗೂಡು	9.13	27.39
ಸಕಲೇಶಪುರ	9.86	29.58
ಆಲೂರು	2.73	8.19
ಒಟ್ಟು	94.46	283.35

ಆ) ಹೌದು.

ಇ) ಬೇಲೂರು ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 15.90 ಕಿಮೀ ಉದ್ದಕ್ಕೆ ರಸ್ತೆ ಬದಿಗೆ ಜಲ್ಲಿ ಕಲ್ಲು ಹಾಕಿಸಿದ್ದು ಅವಶ್ಯಕತೆಗೆ ತಕ್ಕಂತೆ ಚರಂಡಿ ಮಾಡಲಾಗಿದೆ. ಅಲ್ಲದೆ ತೋಳು ಚರಂಡಿಯನ್ನೂ ಸಹ ತೆಗೆಯಲಾಗಿದೆ.

ವಾಟೆಹೊಳೆ ಆಣೆಕಟ್ಟು ಎಡದಂಡೆ ನಾಲೆಯ ಕೆಲಸದ ಪ್ರಗತಿ

195 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಟೆಹೊಳೆ ಆಣೆಕಟ್ಟು ಎಡದಂಡೆ ನಾಲೆಯ ಸುಮಾರು 2000 ಎಕರೆಗೆ ನೀರು ಕೊಡಲು ಅಂದಾಜು ತಯಾರಿಸಿದ್ದು ಆ ನಾಲೆಯ ಕೆಲಸ ಆಣೆಕಟ್ಟು ನಿರ್ಮಾಣವಾಗಿ 10 ವರ್ಷಗಳಾದರೂ ಪ್ರಾರಂಭಿಸದಿರಲು ಕಾರಣವೇನು;

ಆ) ಆಣೆಕಟ್ಟು ಕೆಲಸದಿಂದಾಗಿ ಈ ಹಿಂದೆ 800 ಎಕರೆಗಳಿಗೆ ನೀರು ಒದಗಿಸುತ್ತಿದ್ದು ಮದಗಟ್ಟ ಕಾಲುವೆಯನ್ನು ಮುಚ್ಚಿ ಹಾಕಿ ಹೊಸನಾಲೆ ಕೆಲಸ ಪ್ರಾರಂಭಿಸದಿರುವುದರಿಂದ ಆ ಭಾಗದ ರೈತರು ನೀರಿಲ್ಲದೆ ನೀರಿನ ತೆರಿಗೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಎಡದಂಡೆ ನಾಲೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪ •ಮುಖ್ಯಮಂತ್ರಿಗಳು) :

ಅ) ಯಾವುದೇ ಅಂದಾಜು ತಯಾರಿಸಿರುವುದಿಲ್ಲ. ವಾಟೆಹೊಳೆ ಎಡದಂಡೆ ನಾಲೆಯು ಮದಗಟ್ಟ ಪಿಕ್‌ಅಪ್ ಚಾನಲ್ನ ಪರಿವರ್ತಿತ ನಾಲೆಯಾಗಿರುತ್ತದೆ.

ಆ)ಮದಗಟ್ಟ ಪಿಕ್‌ಅಪ್ ಚಾನಲ್‌ಅಡಿಯಲ್ಲಿ 718ಎಕರೆಗೆ ನೀರನ್ನು ಒದಗಿಸಲಾಗಿದ್ದು, ಅಷ್ಟೇ ಎಕರೆಗೆ ನೀರಿನ ಕರ ವಿಧಿಸಲಾಗಿದೆ. ನೀರು ಒದಗಿಸದೆ ಇರುವ ಪ್ರದೇಶಕ್ಕೆ ನೀರು ತೆರಿಗೆಯನ್ನು ವಿಧಿಸಿರುವುದಿಲ್ಲ.

ಇ) ಪ್ರಶ್ನೆ (ಅ)ಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.